**ದಿನಾಂಕಃ 23-09-2024** **CC NO. 3837/2021 (ಪಿ.ಡಬ್ಲು.1)**

**ಇಂದು ದಿನಾಂಕಃ 23-09-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ SNB ವಕೀಲರಿಂದಃ-**

ನಾನು 7ನೇ ತರಗತಿವರೆಗೆ ವಿದ್ಯಾಭಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಆರೋಪಿತರ ವಿರುದ್ದ ಪಾಲುಗಾರಿಕೆಗಾಗಿ ದಾವೆಯನ್ನು ಸಲ್ಲಿಸಿದ್ದೇನೆ. ಸದರಿ ದಾವೆಯ ವಿರುದ್ದ ಸಲ್ಲಿಸಿದ ಮೇಲ್ಮನವಿ ಚಾಲ್ತಿಯಲಿದೆ ಎಂದರೆ ಸರಿ. ಪಾಲು ಕೊಡದೇ ಇದ್ದಾಗ ನ್ಯಾಯಾಲಯಕ್ಕೆ ಹೋಗಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಸ್ವಲ್ಪ ಪಾಲು ಮಾತ್ರ ನೀಡಿರುವ ಕಾರಣ ದಾವೆ ಹೂಡಿದ್ದೇನೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಜಮೀನಿನ ವಿರುದ್ದ ಮರಗಿಡಗಳ ಸಂಖ್ಯೆಃ ಫಾರಂ ನಂ. 7 ರಲ್ಲಿ ನಮೂದಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 21 ರ 18 ಎಕರೆ ಚಿಲ್ಲರೆ ಗುಂಟೆ ಜಮೀನಿನಲ್ಲಿ ಗಿಡಗಳು ಇದ್ದವು. ಈಗ ನೋಡುತ್ತಿರುವ ಸರ್ವೆ ನಂ. 21 ರ ಪಹಣಿ ಪತ್ರಿಕೆಗಳಲ್ಲಿ ಗಿಡಗಳ ಸಂಖ್ಯೆ ನಮೂದು ಇಲ್ಲ. ಸದರಿ ಪಹಣಿ ಪತ್ರಿಕೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಮಾನವಾಗಿ ಯಾವುದೇ ಒಂದು ಮರ ತೆಗೇಯಬೇಕಾದರೆ ಅರಣ್ಯ ಅಧಿಕಾರಿಗಳ ಪರವಾನಿಗೆ ಬೇಕು ಎಂದರೆ ಸರಿ. ಮರಗಳನ್ನು ಸಿದ್ದು ಮಾಲಕ ಎಂಬ ವ್ಯಕ್ತಿಗೆ ಆರೋಪಿತರು ಮಾರಾಟ ಮಾಡಿರುತ್ತಾರೆ. ಘಟನೆ ಆಗುವ 8 ರಿಂದ 10 ದಿನಗಳ ಮಾದಲು ಗಿಡಗಳನ್ನು ಕಡೆದಿರುತ್ತಾರೆ. ಗಿಡಗಳನ್ನು ಕಡೆದಿರುವ ಬಗ್ಗೆ ಅರಣ್ಯ ಅಧಿಕಾರಿಗಳಿಗೆ ನಾನು ದೂರನ್ನು ಸಲ್ಲಿಸಿಲ್ಲ. ನನ್ನ ದೂರಿನಲ್ಲಿ 8 ದಿನಗಳ ಹಿಂದೆ ಗಿಡಗಳನ್ನು ಕಡೆದಿರುವ ಬಗ್ಗೆ ಮತ್ತು ಇಂತಹ ವ್ಯಕ್ತಿಗೆ ಮಾರಾಟ ಮಾಡಿರುವ ಬಗ್ಗೆ ಉಲ್ಲೇಖವಿಲ್ಲ.

ಸದರಿ ಹೊಲದಲ್ಲಿ ಗಿಡಗಳು ಇರಲಿಲ್ಲ, ಆದ್ದರಿಂದ ಮರ ಕಡೆಯುವ ಪ್ರಶ್ನೆ ಬರುವುದಿಲ್ಲ ಮತ್ತು ಯಾವುದೇ ಜಗಳ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ 2 ಎಕರೆ ಹೆಚ್ಚಿಗೆ ಜಮೀನು ಕೊಡು ಎಂದು ನಾನು ಕೇಳಿರುವ ಕಾರಣ ಅವರು ಒಪ್ಪದೇ ಇದ್ದಾಗ ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಜಗಳವಾದ ನಂತರ ನಾನು ನೇರವಾಗಿ ಪೋಲಿಸ ಠಾಣೆಗೆ ನಾನು ಮತ್ತು ನನ್ನ ಹೆಂಡತಿ ಸೇರಿ ಹೋಗಿದ್ದೇವೆ. ಚಾಸಾ 4 ಮತ್ತು ಆಟೋ ಚಾಲಕ ನನಗೆ ಪೋಲಿಸ ಠಾಣೆಗೆ ಕರೆದುಕೊಂಡು ಹೂಗಿರುತ್ತಾರೆ. ಆಟೋ ಯಾರಿಗೆ ಸಂಬಂಧಪಟ್ಟಿದ್ದು ಎಂದು ನನಗೆ ಗೊತ್ತಿಲ್ಲ. ಆಟೋ ಸಂಖ್ಯೆಃ ನನಗೆ ಹೇಳಲು ಬರುವುದಿಲ್ಲ. ಮರುದಿನ ನಾನು ಚಿಂಚೋಳಿ ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಚಿಂಚೋಳಿ ಸರಕಾರಿ ಆಸ್ಪತ್ರೆಗೆ ಹೋದಾಗಿ ಮಧ್ಯಾಹ್ನ 1-30 ಗಂಟೆ ಆಗಿತ್ತು. ಆಸ್ಪತ್ರೆಯಲ್ಲಿ ವೈದ್ಯರು ನನಗೆ ತಪಾಸಣೆ ಮಾಡಿ ಬರೆದುಕೊಂಡಿರುತ್ತಾರೆ. ನಾನು ಸಾಯಿ ಕ್ಲಿನಿಕ ಎಂಬ ಆಸ್ಪತ್ರೆಗೆ ಹೋಗಿಲ್ಲ. ಆ ದಿನ ಬಿಟ್ಟು ನಾನು ಬೇರೆ ಯಾವುದೆ ದಿನ ಸರಕಾರಿ ಆಸ್ಪತ್ರೆಗೆ ಹೋಗಿಲ್ಲ. ಘಟನೆ ನಡೆದು 1 ತಿಂಗಳ ನಂತರ ನಾನು ಯಾವುದೇ ಆಸ್ಪತ್ರೆಗೆ ಹೋಗಿಲ್ಲ. ಘಟನಾ ದಿನದಿಂದ 1 ತಿಂಗಳ ನಂತರ ಪೋಲಿಸ ಠಾಣೆಗೆ ಪುನಃ ಹೋಗಿರುತ್ತೇನೆ.

**ದಿನಾಂಕಃ 23-09-2024** **CC NO. 3837/2021 (ಪಿ.ಡಬ್ಲು.1)**

ನಿಪಿ-1(ಎ) ಮತ್ತು ನಿಪಿ-2(ಎ) ರ ಸಹಿಗಳಲ್ಲಿ ವ್ಯತ್ಯಾಸ ಇದೆ ಎಂದರೆ ಸರಿ. ದಿನಾಂಕಃ 08-06-2021 ರ ದೂರನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಸದರಿ ದೂರಿನ ಎಲ್ಲಾ ಪುಟಗಳಲ್ಲಿ ಸಹಿ ಮಾಡಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ಬರುವ ಮೊದಲು ದೂರನು SP ಹಾಗೂ Dy.S.P. ರವರಿಗೇ ಸಲ್ಲಿಸಿದ್ದೇನೆ.

ಆರೋಪಿತರಿಗೆ ಸತಾಯಿಸಲು ಹಾಗೂ 2 ಎಕರೆ ಹೆಚ್ಚು ಜಮೀನು ಪಡೆಯಲು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಪೋಲಿಸರು ನನ್ನೊಂದಿಗೆ ಚಿಂಚೋಳಿ ಸರಕಾರಿ ಆಸ್ಪತ್ರೆಗೆ ಬಂದಿದ್ದರು. ಅದೇ ದಿನ ಆಸ್ಪತ್ರೆಗೆ ಹೋದಾಗ ಮಧ್ಯಾಹ್ನ 1-30 ಗಂಟೆ ಆಗಿತ್ತು. ಆಸ್ಪತ್ರೆಯಿಂದ ಪೋಲಿಸರು ಮರಳಿ ಪೋಲಿಸ ಠಾಣೆಗೆ ಮಧ್ಯಾಹ್ನ 3-30 ರಿಂದ 4 ಗಂಟೆ ಕರೆದುಕೊಂಡು ಹೋಗಿರುತ್ತಾರೆ. ಸರ್ವೆ ನಂ. 21 ರ ಜಮೀನಿನಲಿ ಯಾವ ಗಿಡಗಳು ಇದ್ದವು ಎಂದು ಪ್ರಶ್ನಿಸಿದಾಗ ಸಾಕ್ಷಿ ಗಿಡಗಳ ಹೆಸರು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಗಿಡಗಳ ಹೆಸರು ನಾನು ನನ್ನ ದೂರಿನಲ್ಲಿ ಉಲ್ಲೇಖ ಮಾಡಿಲ್ಲ. ಎಷ್ಟು ದುಡ್ಡಿಗೆ ಕಟ್ಟಿಗೆಯನ್ನು ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

1ನೇ ಆರೋಪಿ ನನಗೆ ಗಿಡಗಳ ಮಾರಾಟ ಸಂಬಂಧ 10 ಸಾವಿರ ಹಣ ನೀಡಿದ್ದಾನೆ ಹಾಗೂ ಉಳಿದ 5 ಸಾವಿರ ಹಣ ನೀಡಬೇಕಾಗಿತ್ತು. ಈ ರೀತಿ ಹಣ ನೀಡಿದ ಬಗ್ಗೆ ಮತ್ತು ಉಳಿದ ಹಣದ ಬಗ್ಗೆ ನನ್ನ ದೂರಿನಲ್ಲಿ ಉಲ್ಲೇಖವಿಲ್ಲ. ಆರೋಪಿತರು ಯಾವುದೇ ಗಿಡ ಮಾರಾಟ ಮಾಡಿಲ್ಲ ಮತ್ತು ಯಾವುದೇ ಹಣ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಆರೋಪಿತರು 8500/- ರೂಪಾಯಿ ಕೊಟ್ಟಿರುತ್ತಾರೆ ಎಂದು ಉಲ್ಲೇಖಿಸಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೊದಲು 8500/- ರುಪಾಯಿ ಕೊಟ್ಟಿದ್ದರು ಮತುತ ಘಟನೆಯಾದ ಸಂಜೆ ಉಳಿದ 1500/- ರುಪಾಯಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. 10 ಸಾವಿರ ರೂಪಾಯಿ ನೀಡಿದ್ದಾರೆ ಎಂದು ಯಾವ ಕಾರಣಕ್ಕಾಗಿ ದೂರಿನಲ್ಲಿ ಉಲ್ಲೇಖವಿಲ್ಲ ಎಂದು ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಎಷ್ಟು ನೆನಪು ಇದೆ ಅದನ್ನು ಬರೆಸಿದ್ದೇನೆ ಎಂದು ನುಡಿಯುತ್ತಾರೆ.

**ಮುಂದಿನ ಪಾಟೀಸವಾಲಿಗಾಗಿ ಆರೋಪಿತರ ಪರ ವಕೀಲರು ಸಮಯ ಕೋರಿದರಿಂದ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**